

## ಕೀಳು ಉಪಮೆಗಳ ಕಾಲ

ರಾಜಕೀಯ ಪಕ್ಷವೊಂದರ ದುರ್ನಡತೆಯ ಕುರಿತು ತೀವ್ರ ಅಸಮಾಧಾನ ಹೊಂದಿದ ಶಾಲಿನಿ, 'ಊರಿದ್ದಲ್ಲಿ ಕೊಳೆಗೇರಿ ಇದ್ದಂತೆ... ಹಂಗಾಯಿತು ಇವರ ಕತೆ' ಎಂಬ ಪೋಸ್ಟ್ ಹಾಕಿದಳು. ಮತ್ತೊಂದು ಕಡೆ ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯ ಕುರಿತು ಸಿದ್ಧಾಂತ್, 'ಹತ್ತು ವರ್ಷಗಳ ಇತಿಹಾಸ ಗಮನಿಸಿದರೆ ಈ ಸಂಸ್ಥೆಗಳು ಬಂಜೆಯಾಗಿರುವುದು ಗೊತ್ತಾಗುತ್ತದೆ' ಎಂದು ತಮ್ಮ ಅನಿಸಿಕೆ ಅಪ್‌ಲೋಡ್ ಮಾಡಿದ್ದರು. ತಮ್ಮ ಸಿಟ್ಟು–ಬೇಸರಕ್ಕೆ ಸರಿಯಾದ ಉಪಮೆಗಳನ್ನು ಹುಡುಕಿಕೊಳ್ಳುವಾಗ, ಸ್ವತಃ ಶಾಲಿನಿ ಮತ್ತು ಸಿದ್ಧಾಂತ್ ಅವರ ಮನೋಭಾವವೂ ಬಯಲಾಗಿರುತ್ತದೆ ಎನ್ನುವುದರ ಬಗ್ಗೆ ಅವರು ಯೋಚಿಸಿದಂತಿರಲಿಲ್ಲ. ದುರ್ನಡತೆ ಮತ್ತು ಅನುತ್ಪಾದಕತೆಗೆ ಅವರು ಪರಿಗಣಿಸಿದ ಉಪಮೆಗಳನ್ನು ಗಮನಿಸಿದರೆ, ಸಾಮಾಜಿಕವಾಗಿ ಅವರ ದೃಷ್ಟಿ ಎಷ್ಟು ಅಮಾನವೀಯವಾಗಿದೆ ಎನ್ನುವುದನ್ನು ಗುರುತಿಸುವುದು ಕಷ್ಟವಲ್ಲ. ಇಂತಹ ಉಪಮೆಗಳು ಗೋಡೆಯ ತುಂಬಾ ಮಸಿ ಚೆಲ್ಲದೆ ಇನ್ನೇನು ಮಾಡಿಯಾವು?

ಪಡೆದುಬಿಟ್ಟಿತ್ತು. ಅಲ್ಲಿರುವ ಪದಗಳನ್ನು ಓದುವುದಕ್ಕೆ ಸಜ್ಜನರು ನಾಚಬೇಕು. ಆ ಕೊಳಕು ಸಂಭಾಷಣೆಯ ಹೊಣೆಯನ್ನು ಯಾರೆಲ್ಲಾ ಹೊರಬೇಕು ಹಾಗಿದ್ದರೆ?

ಸುಂದರವಾದ ಗೋಡೆಗಳು ಇತರರಿಗೆ ಸ್ಫೂರ್ತಿದಾಯಕವಾಗಿರುತ್ತವೆ. ಒಂದು ವಿಷಯ ಮಂಡನೆಯ ಕೆಳಗೆ ಅದಕ್ಕೆ ಪೂರಕವಾದ ಅನೇಕ ಕಮೆಂಟ್‌ಗಳು ಇರುತ್ತವೆ. ಅವು ಆ ವಿಷಯದ ಕುರಿತು ಹತ್ತು ಹಲವು ಜನರು ಏನೆಲ್ಲ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ ಎಂಬ ಮಾಹಿತಿಯನ್ನೂ ಕೊಡುತ್ತವೆ.

### ಅರಿವಿನ ಬೆಳಕಿಂಡಿಗಳು

ಒಂದು ಕಾಲಕ್ಕೆ ಅಸಾಧ್ಯ ಎನ್ನುವಂತಹ ಸಂವಹನ ಸಾಧ್ಯತೆಯನ್ನು ಸಾಮಾಜಿಕ ಜಾಲತಾಣಗಳು ತೆರೆದಿರಿಸಿವೆ. ಉದಾಹರಣೆ 'ಎತ್ತಿನಹೊಳೆ ತಿರುವು' ಯೋಜನೆಯ ಹೋರಾಟಗಳ ಕುರಿತು ಪರಿಸರ ಹೋರಾಟಗಾರ ದಿನೇಶ್ ಹೊಳ್ಳ ಅವರು ಅನೇಕ ಸ್ಟೋರಿಗಳನ್ನು ಅಪ್‌ಲೋಡ್ ಮಾಡಿದ್ದರು. ಕನ್ನಡದಲ್ಲಿ ಅನೇಕ ವಿಚಾರಗಳನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದರು. ಅದನ್ನು ಓದಲು ಬಾರದ, ಆದರೆ ಚಿತ್ರಗಳಲ್ಲಿರುವ ಭಾವನೆಯನ್ನು ಗಮನಿಸಿದ ಫ್ರಾನ್ಸ್‌ನ ಡೀಪಿ ನಗರದ ಸ್ಯಾಂಡ್ರಿನ್ ಸಫೋರ್ಗ್ ಎನ್ನುವ ಕಲಾವಿದರೊಬ್ಬರು ದಿನೇಶ್ ಅವರನ್ನು ಸಂಪರ್ಕಿಸಿದ್ದರು. ಸ್ಥಳೀಯ ಜನರ ಸಮಸ್ಯೆಯ ಕುರಿತು ಮಾಹಿತಿ ಪಡೆದುಕೊಂಡಿದ್ದರು. ಫ್ರಾನ್ಸ್‌ನಲ್ಲಿ ನಡೆಯುವ ಗಾಳಿಪಟ ಉತ್ಸವದ ಸಂಚಾಲಕಿಯೂ ಆಗಿರುವ ಅವರು, ಉತ್ಸವಕ್ಕೆ ಲಾಂಛನವನ್ನು ಸಿದ್ಧಪಡಿಸುವಂತೆ ಚಿತ್ರಕಾರರೂ ಆದ ದಿನೇಶ್‌ರಿಗೆ ಆಹ್ವಾನವನ್ನೂ ನೀಡಿದ್ದರು. ಇಬ್ಬರ ನಡುವೆ ಸಂವಹನಕ್ಕಾಗಿ ಸಾಮಾನ್ಯವಾದ ಭಾಷೆಯೂ ಇಲ್ಲ. ಅಲ್ಲದೆ ಪರಸ್ಪರ ಭೇಟಿಯಿಂದ ಸಾಧ್ಯವಾದ ವಿಚಾರವೂ ಅವರದ್ದಾಗಿರಲಿಲ್ಲ. ಸಾಮಾಜಿಕ ಜಾಲತಾಣಗಳು ಇಬ್ಬರ ನಡುವೆ ಸಂಬಂಧ ಕುದುರಿಸಿದ್ದವು. ಹೌದಲ್ಲವೇ, ಜಾಲತಾಣಗಳು ಮುಕ್ತವಾದ ಬೆಳಕಿಗೆ ಆಹ್ವಾನ ರೂಪದಲ್ಲಿವೆ; ಆ ಕಿಟಕಿಗಳ ಮೂಲಕ ಬೆಳಕನ್ನಾದರೂ ಬರಮಾಡಿಕೊಳ್ಳಬಹುದು ಅಥವಾ ಕೊಳಕನ್ನಾದರೂ ಬರಮಾಡಿಕೊಳ್ಳಬಹುದು.

ಸಾಮಾಜಿಕ ಜಾಲತಾಣಗಳೆಂದ ಕೂಡಲೇ, ವೆಬ್‌ಸೈಟ್‌ಗಳಿಗೇ ಸೀಮಿತವಾಗಿ ಈ ಸಮಸ್ಯೆ ಇಲ್ಲ. ವಾಟ್ಸ್ ಆ್ಯಪ್‌ನ ಮೂಲಕ ಮೊಬೈಲ್‌ನ ಪುಟ್ಟ ಸ್ಕ್ರೀನ್ ಕೂಡ ಗಲೀಜಾಗುವುದು ಹೊಸದೇನಲ್ಲ. ನಿರ್ದಿಷ್ಟ ಉದ್ದೇಶಕ್ಕೆ ಮಾಡಿಕೊಂಡ ಗುಂಪಿನಲ್ಲಿ ಕೆಟ್ಟ ಜಗಳಗಳು ಆಗುವುದು, ಅಥವಾ ಅಡ್ಮಿನ್ ಮಾತು ಮೀರಿ ವರ್ತಿಸುವ ಮೂಲಕ ಗುಂಪಿನ ಉದ್ದೇಶವನ್ನೇ ನಿಷ್ಕ್ರಿಯಗೊಳಿಸುವ ಅನೇಕ ಉದಾಹರಣೆಗಳನ್ನು ದೈನಂದಿನ ಜೀವನದಲ್ಲಿ ನೋಡುತ್ತಲೇ ಇರುತ್ತೇವೆ.

ಹೊಸ ಕನ್ನಡ ಪುಸ್ತಕಗಳ ಮಾಹಿತಿ ಕೊಡುವುದಕ್ಕೆಂದೇ ರಾಮ್ ಎನ್ನುವವರು ಒಂದು ವಾಟ್ಸ್‌ಆ್ಯಪ್ ಗ್ರೂಪ್ ಮಾಡಿದರು. ಒಂದೆರಡು ತಿಂಗಳು ಆ ಗುಂಪಿನಲ್ಲಿ ಆಸಕ್ತರು ಮುತುವರ್ಜಿಯಿಂದ ಮಾಹಿತಿಗಳನ್ನು ಅಪ್‌ಲೋಡ್ ಮಾಡಿದರು. ಅದಾಗಿ ಕೆಲ ದಿನಗಳಲ್ಲಿ ಆ ಗುಂಪಿಗೆ ಸೇರಿದ ವ್ಯಕ್ತಿಯೊಬ್ಬ, ತನ್ನ ಪ್ರಕಾಶನದ ಪುಸ್ತಕಗಳ ಮಾಹಿತಿಯನ್ನು ಬಿತ್ತರಿಸತೊಡಗಿದ. ದಿನ ಬೆಳಗಾದರೆ ತನ್ನದೇ ಪ್ರಕಾಶನದ ಪುಸ್ತಕಗಳ